ಜಯಂತ ಕಾಯ್ಕಿಣಿ

# 'ಬಾಳೆ ಹೂವಿನ ಚಟ್ನಿ'

'ಒಂದು ಸಂಕೇತಿ ಗ್ರಾಮದ ವೃತ್ತಾಂತ' ಎಂಬ ಉಪ ಶೀರ್ಷಿಕೆಯೊಂದಿಗೆ ಪ್ರಕಟಗೊಂಡಿರುವ ಪ್ರಮೀಳಾ ಸ್ವಾಮಿ ಅವರ 'ಊರೆಂಬ ಉದರ' ಎಂಬ ಅಪರೂಪದ ಪುಸ್ತಕವು ನನ್ನ ಮನಸ್ಸನ್ನು ಆವರಿಸಿಕೊಂಡಿದೆ. ಪಾಕಶಾಸ್ತ್ರದ ಕೈಪಿಡಿ ಎಂಬ ನೆಪದೊಂದಿಗೆ ಹುಟ್ಟಿದ ಈ ಬರವಣಿಗೆ, ಗ್ರಾಮದಲ್ಲಿನ ತನ್ನ ಬಾಲ್ಯ ಮತ್ತು ಎಳವೆಯ ದಿನಗಳನ್ನು ಚಿತ್ರವತ್ತಾಗಿ ಹಂಚಿಕೊಳ್ಳುವ ನೆನಪುಗಳ ಕಥನವೂ ಆಗಿ ಕೂತು ಬಿಟ್ಟಿದೆ. ತೀವ್ರ ಜೀವನಾನುಭವದ ಪ್ರಶಾಂತ ಸರೋವರದ ಈ ನೆನಪಿನ ಅಲೆಗಳು, ತೀರದ ಮೇಲೆ ಕೂತು ಕಲ್ಲೆಸೆದು ಎಬ್ಬಿಸಿದಂತಹವಲ್ಲ. ಸಹಜ ಗಾಳಿಗೆ ಮೂಡಿ ವಿಸ್ತರಿಸುವಂಥವು. ಪ್ರಮೀಳಾ ಅವರ 'ಪಕ್ವ' ನೋಟದ ಪಾರದರ್ಶಕತೆಯೇ ಈ ಪುಸ್ತಕದ ಜೀವಾಳ.

'ಗಂಡುಬೀರಿ' ಎಂದೇ ಕೀಟಲೆಗೊಳಗಾಗುತ್ತಿದ್ದ ಗ್ರಾಮದ ಮತ್ತು ಶಾಲೆಯ ಕಣ್ಮಣಿ ಪೋರಿ ಪ್ರಮೀಳಾಗೆ ಮರ ಹತ್ತುವುದೆಂದರೆ ಎಲ್ಲಿಲ್ಲದ ಪ್ರೀತಿ. ಅದಕ್ಕಾಗಿ ಹೊಳೆ ಅಂಚಿನಲ್ಲಿಯ ಮಾವಿನ ಮರ ಹತ್ತಿ – ಅತ್ತ ಏರಲಾಗದೆ ಇತ್ತ ಇಳಿಯಲಾಗದೆ ಆಕೆ ಸಿಕ್ಕುಬಿದ್ದಾಗ ಅವಳ ಜೊತೆಗಿದ್ದ ವಿಶ್ವ ಮತ್ತು ಗುಂಡ ಎಂಬ ಕಿಂಕರರ ಬೊಬ್ಬೆಗೆ ಪಕ್ಕದ ಹೊಲದ ರೈತರೊಬ್ಬರು ಬಂದು ಹಗ್ಗದ ಕುಣಿಕೆ ಎಸೆದು ಬಚಾವು ಮಾಡುತ್ತಾರೆ... ಮನೆಯಲ್ಲಿ ಅಮ್ಮ (ತನ್ನ) ಬಳೆ ಒಡೆಯುವಷ್ಟು ಹೊಡೆಯುತ್ತಾರೆ. ಮನೆಯಲ್ಲಿ ದಾರ ಕಟ್ಟಿ ಸೀರೆಯನ್ನೆ ಪರದೆಯನ್ನಾಗಿಸಿ ಮಕ್ಕಳು ನಾಟಕ ಆಡುತ್ತಾರೆ... ಊರಿಗೆ ಹೊಸದಾಗಿ ಬರಲಾರಂಭಿಸಿದ ಬಸ್ಸು ಶಾಲೆಯ ಎದುರಿನ ಕಟ್ಟೆಗೆ ಒಂದು ರೌಂಡು ಹಾಕಿ ಹೋಗುವುದನ್ನು ಊರವರೆಲ್ಲ ಹೆಮ್ಮೆಯಿಂದ ತಮ್ಮ ತಮ್ಮ ಮನೆಯಿಂದ ನೋಡುತ್ತಾರೆ... ಹಬ್ಬದ ತಿಂಡಿಯನ್ನು ಗುಟ್ಟಾಗಿ ಮೆಲ್ಲುವ ಪಿತೂರಿಯ ರೂವಾರಿಯಾದ ಎದುರು ಮನೆಯ ಊರ್ಮಿಳೆ ಹೆದರಿ ಓಡಿ, ತಟಕ್ಕನೆ ತನಗೂ ಅದಕ್ಕೂ ಸಂಬಂಧ ಇಲ್ಲದಂತೆ ತನ್ನ ಮನೆಯ ಜಗುಲಿಯ ಮೇಲೆ ಬೀದಿ ನೋಡುತ್ತ ಕೂರುತ್ತಾಳೆ... ಬಳೆ ಮಲಾರ ತಂದ ಬಳೆಗಾರ, ತವರಿಂದ ಅರಿಷಿಣ ಕುಂಕುಮ ಬಂದಿರದ ಮಹಿಳೆಯರನ್ನು – "ಬಳೆಯ ಮುಂದೆ ಕಣ್ಣೀರು ಹಾಕಬಾರದಮ್ಮಾ" ಎಂದು ಸಂತೈಸುತ್ತಾ ಅವನೇ ತವರಿನ ಬಂಧುವಂತೆ ಎರಡು ರೂಪಾಯಿ ಕೊಡುತ್ತಾನೆ... ಹಾಲು ಕರೆಯುವಾಗ ಅಮ್ಮ ಗ್ರಾಮದ ಯಾವುದೇ ಬಾಣಂತಿಗೆ, ಮಗುವಿಗೆ ಮೊದಲ ಪಾಲು ತೆಗೆದಿಡುತ್ತಾಳೆ... ರಾತ್ರಿ ಊರವರನ್ನು ರಂಜಿಸಿದ ಚಕ್ಕಳ ಗೊಂಬೆಯಾಟದ ಕುಟುಂಬ ಮರುದಿನ ಮುಂಜಾನೆ ಯಾವುದೋ ಮರದ ಕೆಳಗೆ ಒಲೆ ಉರಿಸುತ್ತಿರುತ್ತದೆ... ಎಲ್ಲರ ಮನೆಯಲ್ಲೂ ಗಂಡುಮಕ್ಕಳ ಬಗ್ಗೆ ಪಕ್ಷಪಾತ ಸದಾ ಜಾರಿಯಲ್ಲಿರುತ್ತದೆ... ಅಡಿಕೆ ಸುಲಿಯುವಾಗ ಅಥವಾ ಸಾಮೂಹಿಕವಾಗಿ ಹಪ್ಪಳ ಸಂಡಿಗೆ ಮಾಡುವಾಗ ಎಲ್ಲರಿಗೂ ನಿನ್ನೆಯ ನಾಟಕದ ಗುಂಗೋ ಅಥವಾ 'ಕಮಾನು' ಕಟ್ಟಿದ ಚಕ್ಕಡಿಗಳಲ್ಲಿ ಕೆ.ಆರ್. ಪೇಟೆಗೆ ಹೋಗಿ ಒಟ್ಟಿಗೇ ನೋಡಿಕೊಂಡು ಬಂದ ಸಿನಿಮಾದ ಗುಂಗೋ ಸ್ಫೂರ್ತಿದಾಯಕವಾಗಿ ಆವರಿಸಿರುತ್ತದೆ...

ಇಂಥ ಅಪ್ಪಟ ಸಮುದಾಯ ಜೀವನದ ಸ್ಮೃತಿಗಳು ಇಲ್ಲಿಯ ಪುಟ ಪುಟಗಳಲ್ಲಿ, ಅವರೇ ಹೇಳುವ ಅವರ ಮನೆಯ ಹಳೆಯ 'ಐವತ್ತು ಇಂಚಿನ ಪಟ್ಟಾಭಿಷೇಕದ ಚಿತ್ರದ ಚಿನ್ನದ ರೇಖೆ'ಗಳಂತೆ ಮಿಂಚುತ್ತವೆ. ಪ್ರತಿ ಅಧ್ಯಾಯದಲ್ಲೂ ಇಂಥ ನೆನಪಿನ ಆರ್ದ್ರ ಚಿತ್ರಗಳ ನಂತರ ಅದರಿಂದಲೇ